### ಕೃತಕ ಕಣ್ರೆಪ್ಪೆಯ ಬಳಕೆ ಹೇಗೆ?

ಕೃತಕ ಕಣ್ರೆಪ್ಪೆಗಳು ವಿವಿಧ ವಿನ್ಯಾಸದಲ್ಲಿ ಸಿಗುತ್ತದೆ. ನಿಮ್ಮ ಕಣ್ರೆಪ್ಪೆಯ ಆಕಾರಕ್ಕೆ ತಕ್ಕಂತೆ ಕತ್ತರಿಸಿಕೊಂಡು ಅದನ್ನು ರೆಪ್ಪೆಗೆ ಅಂಟಿಸಿಕೊಳ್ಳಬೇಕು. ಒಳ್ಳೆಯ ಗುಣಮಟ್ಟದ ಅಂಟು ಬಳಸಿ.ಈ ಕಣ್ಣಿನ ರಪ್ಪೆಗಳನ್ನು ಅಂಟಿಸಿದ ಮೇಲೆ ಅದರ ಮೇಲೆ ಐ ಲೈನರ್ ಹಚ್ಚಿಕೊಳ್ಳಿ. ಇದರಿಂದ ಕಣ್ಣು ಆಕರ್ಷಕವಾಗಿ ಕಾಣುತ್ತದೆ. ವಿವಿಧ ಬಣ್ಣದ ಐಶ್ಯಾಡೋ ಕೂಡ ಬಳಸಬಹುದು.

ಈ ಲ್ಯಾಶಸ್‌ಗಳು ಮಾರುಕಟ್ಟೆಯಲ್ಲಿ ನಾನಾ ವಿಧದಲ್ಲಿ ಲಭ್ಯವಿದೆ. ಆದರೆ ಫೈಬರ್ ಲ್ಯಾಶಸ್‌ಗೆ ಹೆಚ್ಚು ಬೇಡಿಕೆ ಇದೆ. ಏಕೆಂದರೆ ಇದರ ಬಳಕೆ ಹಾಗೂ ನಿರ್ವಹಣೆ ಮಾಡುವುದು ಸುಲಭವಾಗಿದೆ. ಐ ಲ್ಯಾಶಸ್ ಖರೀದಿಸುವಾಗ ನಿಮ್ಮ ಕಣ್ಣಿನ ಬಣ್ಣ, ಮುಖದ ಆಕಾರವನ್ನು ಗಮನದಲ್ಲಿಟ್ಟುಕೊಳ್ಳಿ.



ಕಾಣಿಸುವ ಐ ಲ್ಯಾಶಸ್ ಬೇಕೆನಿಸಿದರೆ ಮನುಷ್ಯನ ಕೂದಲಿನಂತೆ ಕಾಣಿಸುವ ಕಣ್ರೆಪ್ಪೆ ಬಳಸಬಹುದು. ನಿಮ್ಮ ಕಣ್ಣಿನ ಬಣ್ಣ ಕಂದು ಅಥವಾ ಹಸಿರು ಬಣ್ಣವಾಗಿದ್ದರೆ ನೇರಳೆ ಬಣ್ಣದ ಕಣ್ರೆಪ್ಪೆ ತುಂಬಾ ಚೆನ್ನಾಗಿ ಕಾಣಿಸುತ್ತದೆ. ನೋಡುವವರಿಗೆ ನಿಮ್ಮ ಕಣ್ಣು ಬಟ್ಟಲು ಕಣ್ಣಿನಂತೆ ಕಾಣಿಸುತ್ತದೆ. ಕೆಂಬಣ್ಣದ ಕಣ್ಣಿನವರಿಗೆ ಹಸಿರು ಬಣ್ಣದ ಕಣ್ರೆಪ್ಪೆ ತುಂಬಾ ಚೆನ್ನಾಗಿ ಸರಿ ಹೊಂದುತ್ತದೆ.

## ಐ ಲ್ಯಾಶಸ್ ನಿರ್ವಹಣೆ

ಒಮ್ಮೆ ಬಳಸಿದ ನಂತರ ಈ ಲ್ಯಾಶಸ್ ಅನ್ನು ತೆಗೆಯುವ ಕೆಲಸ ಕೂಡ ಅಷ್ಟೇ ಮಹತ್ವದ್ದಾಗಿರುತ್ತದೆ. ಇದನ್ನು ತೆಗೆಯುವಾಗ ಎಣ್ಣೆಯನ್ನು ಬಳಸಬೇಡಿ. ಹತ್ತಿಯ ಬಡ್ಸ್ ತೆಗೆದುಕೊಂಡು ಅದನ್ನು ಹಾಗೂ ಆಯಿಲ್ ಫ್ರೀ ಮೇಕಪ್ ರಿಮೂವರ್ ಗೆ ಅದ್ದಿ ನಿಧಾನಕ್ಕೆ ನಿಮ್ಮ ಲ್ಯಾಶಸ್ ಮೇಲೆ ಉಜ್ಜಿ ಆಗ ಅದು ನಿಧಾನಕ್ಕೆ ಬರುತ್ತದೆ.

ಒಂದು ಚಿಕ್ಕ ಬೌಲ್‌ಗೆ ನೀರು ಹಾಕಿ ಅದಕ್ಕೆ ಲಿಕ್ವಿಡ್ ಸೋಪ್ ಹಾಕಿ ನೀವು ಬಳಸಿದ ಐ ಲ್ಯಾಶಸ್ ಹಾಕಿ ಸ್ವಚ್ಛಮಾಡಿ. ಇದು ಅದರಲ್ಲಿರುವ ಕೊಳೆ, ಅಂಟು ಹಾಗೂ ಮಸ್ಕರಾ ಅನ್ನು ತೆಗೆಯುವುದಕ್ಕೆ ಸಹಾಯಕವಾಗುತ್ತದೆ. ಇನ್ನು ಟ್ವೀಸರ್ಸ್ ಬಳಸಿ ನೀವು ಉಪಯೋಗಿಸಿದ ಐ ಲ್ಯಾಶಸ್‌ನ ಅಂಟನ್ನು ತೆಗೆಯಬಹುದು. ಐ ಲ್ಯಾಶಸ್ ಸ್ವಚ್ಛಗೊಳಿಸಿದ ನಂತರ ಅದು ಸ್ವಲ್ಪ ಹೊತ್ತು ಒಣಗಲು ಬಿಡಿ ನಂತರ ಅದರ ಬಾಕ್ಸ್ ನಲ್ಲಿಯೇ ಹಾಕಿ ಇಡಿ. ಹಾಗೂ ಸೂರ್ಯನ ಕಿರಣ ತಾಕದಂತೆ ಇಡಿ.

### ಮಸ್ಕರಾ ಜಾದೂ

ಇನ್ನು ನಿಮ್ಮ ಕಣ್ರೆಪ್ಪೆಗೆ ಸರಿಹೊಂದುವಂತಹ ಮಸ್ಕರಾ ಕೂಡ ಮಾರುಕಟ್ಟೆಯಲ್ಲಿ ಸಿಗುವುದರಿಂದ ಕಣ್ಣಿನ ಮೇಕಪ್ ಅನ್ನು ಇನ್ನೂ ಚೆಂದವಾಗಿ ಮಾಡಬಹುದು. ನಿಮ್ಮ ಕಣ್ರೆಪ್ಪೆ ಚಿಕ್ಕದ್ದಾಗಿದ್ದರೆ ಲೆಂಥನಿಂಗ್ ಮಸ್ಕರಾ ಉಪಯೋಗಿಸಬಹುದು. ಹಾಗೇ ತೆಳುವಾದ ಕಣ್ರೆಪ್ಪೆ ಇದ್ದರೆ ಇದಕ್ಕೆ ಸರಿಹೊಂದುವಂತಹ ದಪ್ಪನೇ ಮಸ್ಕರಾ (ಥಿಕ್ನಿಂಗ್ ಮಸ್ಕರಾ) ಇದೆ. ಹಾಗೇ ನಿಮ್ಮ ಕಣ್ರೆಪ್ಪೆ ನೇರವಾಗಿದ್ದರೆ ಅದನ್ನು ಕರ್ಲ್ ಮಾಡಲು ಕೂಡ ಕರ್ಲಿಂಗ್ ಮಸ್ಕರಾ ಕೂಡ ಇದೆ.

ನಿಮ್ಮ ಕಣ್ಣಿನ ಬಣ್ಣಕ್ಕೆ ತಕ್ಕುದಾದ ಮಸ್ಕರಾ ಬಳಸಿದರೆ ಕಣ್ಣಿನ ಸೌಂದರ್ಯವನ್ನು ಇನ್ನಷ್ಟು ಇಮ್ಮಡಿಗೊಳಿಸಬಹುದು. ಕಣ್ಣು ಹಸಿರು ಬಣ್ಣದ್ದಾಗಿದ್ದರೆ ನೇರಳೆ ಬಣ್ಣದ ಮಸ್ಕರಾ ಉಪಯೋಗಿಸಿ. ಇವೆರೆಡು ಶೇಡ್‌ಗಳು ನಿಮ್ಮ ಕಣ್ಣಿಗೆ ಮತ್ತಷ್ಟು ಮೆರುಗು ನೀಡುತ್ತದೆ. ನಿಮ್ಮ ಕಣ್ಣು ಕೆಂಬಣ್ಣದ್ದಾಗಿದ್ದರೆ ಹಸಿರು ಬಣ್ಣದ ಮಸ್ಕರಾ ಉಪಯೋಗಿಸಿ. ಇವರೆಡರ ಸಂಮಿಶ್ರಣದಿಂದ ನಿಮ್ಮ ಕಣ್ಣು ಮತ್ತಷ್ಟು ಸುಂದರವಾಗಿ ಎಲ್ಲರನ್ನು ಸೆಳೆಯುತ್ತದೆ. ಹಾಗೇ ಹಳದಿ ಬಣ್ಣದ ಮಸ್ಕರಾ ಕೂಡ ಕೆಂಬಣ್ಣದ ಕಣ್ಣಿನವರ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ.

ಕಣ್ಣು ನೀಲಿ ಬಣ್ಣದ್ದವಾಗಿದ್ದರೆ ಗುಲಾಬಿ ಬಣ್ಣದ ಮಸ್ಕರಾ ಉಪಯೋಗಿಸಬಹುದು. ಕಂದು ಬಣ್ಣದ ಕಣ್ಣಿನವರಿಗೆ ರಿಚ್ ಪ್ಲಮ್ ಬಣ್ಣದ ಮಸ್ಕರಾ ತುಂಬಾ ಚೆನ್ನಾಗಿ ಸೂಟ್ ಆಗುತ್ತದೆ.ಬೂದು ಬಣ್ಣದ ಕಣ್ಣಿನವರಿಗೆ ಗಾಢವಾದ ಆಕಾಶ ನೀಲಿ ಬಣ್ಣದ ಮಸ್ಕರಾ ಬಳಸಬಹುದು. ಇನ್ನು ನಮ್ಮ ಕಣ್ಣು ನೀಲಿ, ಹಸಿರು ಬಣ್ಣ ಇಲ್ಲವೆಂದುಕೊಂಡವರು ಇದಕ್ಕೆ ತಕ್ಕದಾದ ಐಲೆನ್ಸ್ ಉಪಯೋಗಿಸಿಕೊಂಡು ಕಲರ್ ಕಲರ್ ಮಸ್ಕರಾ ಬಳಸಬಹುದು. ಇದು ಪಾರ್ಟಿ ಸಮಾರಂಭಗಳಿಗೆ ಹೋಗುವವರಿಗೆ ಒಂದು ಗ್ರ್ಯಾಂಡ್ ಲುಕ್ ನೀಡುತ್ತದೆ.

### ಐ ಶ್ಯಾಡೋ

ಇನ್ನು ಈ ಕಣ್ಣಿನ ರೆಪ್ಪೆಯ ಮೇಲೆ ಹೆಚ್ಚುವ ಈ ಐ ಶ್ಯಾಡೊ ಕೂಡ ಕಣ್ಣನ್ನು ಆಕರ್ಷಕವಾಗಿ ಕಾಣುವಂತೆ ಮಾಡುತ್ತದೆ. ಡ್ರೆಸ್‌ಗೆ ಸರಿ ಹೊಂದುವಂತಹ ಬಣ್ಣದ ಶೇಡ್ಸ್ ಚೆನ್ನಾಗಿ ಕಾಣುತ್ತದೆ. ಸಿಲ್ವರ್ ಮತ್ತು ಬಿಳಿ ಬಣ್ಣದ ಐ ಶ್ಯಾಡೊ ಕಣ್ಣಿಗೆ ಹೆಚ್ಚು ಸುಂದರವಾಗಿ ಕಾಣುತ್ತದೆ.ಇನ್ನು ಪಾರ್ಟಿಗೆ ಬ್ಲೂ, ಪರ್ಪಲ್ ಶೇಡ್ ಗಳು ಹೆಚ್ಚು ಸೂಟ್ ಆಗುತ್ತದೆ. ಐ ಶ್ಯಾಡೋ ಬಳಸುವಾಗ ನಿಮ್ಮ ಕಣ್ಣಿನ ಬಣ್ಣಕ್ಕೆ ಹೊಂದುವಂತಹ ಐ ಶ್ಯಾಡೋ ಬಳಸಿದರೆ ಹೆಚ್ಚು ಆಕರ್ಷಕವಾಗಿ ಕಾಣಬಹುದು. ಬಿಳಿ ಬಣ್ಣದವರು ನೀಲಿ ಬಣ್ಣದ ಐ ಶ್ಯಾಡೊ ಬಳಸಿದರೆ ಲುಕ್ ಚೆನ್ನಾಗಿರುತ್ತದೆ.

ಕಣ್ಣಿನ ಮೇಕಪ್ ಮಾಡುವಾಗ ಏನೇ ಬಳಸಿದರೂ ಆದಷ್ಟು ಹುಷಾರಾಗಿ ಬಳಸಬೇಕು. ಕೆಲವೊಮ್ಮೆ ಈ ಕೃತಕ ಐಲ್ಯಾಶಸ್, ಮಸ್ಕರಾ ನಮ್ಮ ಕಣ್ಣಿನ ತ್ವಚೆಗೆ ಸರಿಹೊಂದೇ ಇರಬಹುದು. ಕಣ್ಣಿನ ಭಾಗ ಸೂಕ್ಷ್ಮ ವಾಗಿರುವುದರಿಂದ ನಿಮಗೆ ಸರಿಹೊಂದುವಂತಹ ಬಣ್ಣವನ್ನೇ ಉಪಯೋಗಿಸಿ. ಒಮ್ಮೆ ಬಳಸಿದ ನಂತರ ಅದನ್ನು ತೆಗೆದಿಡುವಾಗ ಕಣ್ಣಿನ ಆರೋಗ್ಯದ ಕುರಿತು ಕಾಳಜಿ ವಹಿಸಿ. ಸಮಾರಂಭ, ಪಾರ್ಟಿ ಇದ್ದಾಗ ಬಳಸಿ

## ಬಟ್ಟಲು ಕಂಗಳಿಗೆ ತೆಳ್ಳಗಿನ ಕಾಜಲ್

ಮುಖದ ಪ್ರತೀ ಅಂಗ ತಿದ್ದಿ ತೀಡಿಕೊಂಡರೆ ಅದೇನೋ ಸಂತೃಪ್ತಿ. ಕಣ್ಣುಗಳಿಗಂತೂ 'ಐ ಲೈನರ್ ಬೇಕೇ ಬೇಕು. ಮೊದಲು ಬರಿ ಕಪ್ಪು ಬಣ್ಣದಲ್ಲಿ ಸಿಂಗರಿಸಿಕೊಳ್ಳಬೇಕಿತ್ತು. ದೊಡ್ಡ ಬಟ್ಟಲು ಕಣ್ಣಿನವರಿಗೆ ತೆಳ್ಳಗಿನ ಕಾಜಲ್ ಹಿತವಾಗಿ ತೋರಿದರೆ ಚಿಕ್ಕ ಕಣ್ಣಿನವರಿಗೆ ಸ್ವಲ್ಪ ಜಾಸ್ತಿ ತೀಡಿದ ಬಣ್ಣ ಅಂದವಾಗಿ ಕಾಣಿಸುತ್ತದೆ.. ನನ್ನ ಬಳಿ ಈಗ ಹೆಚ್ಚುಕಮ್ಮಿ ಎಲ್ಲ ತೆರನಾದ ಬಣ್ಣಗಳಿವೆ. ಸ್ವಲ್ಪ ವಿಭಿನ್ನವಾಗಿ ತೋರುವ ಬಿಳಿ, ಹಳದಿ ಐ ಲೈನರ್ ಸಹಾ ನನ್ನ ಸಂಗ್ರಹದಲ್ಲುಂಟು. ಹಾಕಿಕೊಂಡ ಬಟ್ಟೆಗನುಗುಣವಾಗಿ ಕಣ್ಣುಗಳ ಶೇಡ್ಸ್ ಬದಲಾಗುತ್ತದೆ. ಮಸ್ಕರಾ ನಮ್ಮ ಐ ಲ್ಯಾಶಸ್ ಅನ್ನು ಒಪ್ಪವಾಗಿಸಿದರೆ ಐ ಲೈನರ್ ಕಣ್ಣುಗಳನ್ನು ಆಕರ್ಷಣೀಯವನ್ನಾಗಿಸುತ್ತದೆ.

**-ವಾಣಿ ಶೆಟ್ಟಿ, ಮೇಕಪ್ ಪ್ರಿಯೆ**